Sri B. P. GANGADHAR.—May I know the total estimate of this project and also the acreage of land that would be brought under cultivation ?

Sri VEERENDRA PATIL.—The total estimated cost of the project is 16.30 crores, to irrigate one lakh of acres in Hassan and Mandya Districts.

Sri B. P. GANGADHAR.—What will be the area of cultivated land that will come under submersion ?

Sri VEERENDRA PATIL.—If the Hon'ble Member can put a separate question, I will be able to furinsh the answer.

Sri DIGAMBARA RAO B. KALMANKAR.—May I know what percentage of the esti nated cost is going to be spent on the construction of the colony buildings ?

Sri VEERENDRA PATIL.—That will be negligible.

Irrigation-Cum-Flood Protection Dam

73. Sri N. A. CHANNE GOWDA (Pandavapura) [On behalf of SRI N. HUTCHMASTY GOWDA (Huliyurdurga)].—

Will the Minister for Public Works be pleased to state :—

(*a*) Whether there is any proposal to construct an irrigation-cum-flood protection Dam at Manchanabale in Magadi Taluk across the River Arkavathi ;

(*b*) if so, when this project was prepared and what would be the estimated cost ;

(*c*) whether this project was initially proposed to be taken up as an exclusively irrigation project, if so what was the estimated cost according to the original estimate :

(*d*) whether there is any increase in the area which comes under Achkat after making a provision for flood control also in the estimate ;

(*e*) the cost per acre according to the revised estimate ;

(*f*) whether another site *viz.*, 'Ramagundlu' was surveyed for determining its economical and technological feasibility ;

(*g*) whether they would take up Ramagundlu site for the construction of the dam which would be beneficial to both Magadi and Ramanagaram Taluks and which would be both technologically and economically feasible ?

1.—Sri VEERENDRA PATIL (Minister for Public Works).—

(*a*) Yes.

(*b*) 1966, the estimated cost is Rs. 316.78 lakhs.

(*c*) Yes, at a cost of Rs. 174 lakhs.

(*d*) No.

(*e*) Rs. 2,485

(*f*) Yes.

(*g*) No, as it is unsuitable.

ಶ್ರೀ ಎನ್. ಎ. ಜನ್ನೇಗೌಡ.—ಪರ್ಯಾಯ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ ಯೆಂದು ಹೇಳಿದ್ದೀರಿ. ಮೊದಲನೆಯ ಹಂತದಲ್ಲಿ ಒಂದು ಲಕ್ಷ ಎಕರೆಗೆ ನೀರಾವರಿಯಾಗಬಹುದೆಂದು ಹೇಳಿದಿರಿ. ಮೊದಲನೆಯ ಹಂತದಲ್ಲಿ ಒಂದು ಲಕ್ಷ ಎಕರೆಗೆ ನೀರು ಸರಬರಾಜು ಮಾಡುವುದಕ್ಕೆ ಕೊಂದರೆಯಾಗುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಮೊದಲನೆಯ ಸ್ಟೇಜಿನಲ್ಲಿ ಒಂದು ಲಕ್ಷ ಎಕರೆಗೆ ನೀರನ್ನು ಒದಗಿ ಸುವುದಕ್ಕಾಗುವುದಿಲ್ಲ. ಮೊದಲನೆಯ ಸ್ಟೇಜಿಗೆ 16.30 ಲಕ್ಷ ರೂಪಾಯಿಗಳಾಗುತ್ತದೆ. ಸೆಕೆಂಡ್ ಸ್ಟೇಜ್ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಎರಡನೆಯ ಸ್ಟೇಜ್‌ನ ಪ್ಲಾನ್ಸ್ ಅಂಡ್ ಎಸ್ಟಿಮೇಟ್ಸ್ ತಯಾರಾಗುತ್ತಿದೆ. ಅದು ಆದಮೇಲೆ ಎಷ್ಟು ಎಕರೆಗೆ ನೀರಾವರಿಯಾಗುತ್ತದೆಂದು ಹೇಳ ಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನಾಗಮಂಗಲ ತಾಲ್ಲೂಕನ್ನೂ ನೀರಾವರಿ ಮಾಡಲು ಹೊಸ ದಾಗಿ ಸಮೀಕ್ಷೆ ನಡೆಸಲಾಗುತ್ತಿದೆಯೆಂದು ಹೇಳಿದ್ದೀರಿ. ನಾಗಮಂಗಲಕ್ಕೆ ನೀರನ್ನು ಒದಗಿಸಲು ಎಷ್ಟು ಖರ್ಚಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಸರ್ವೆ ಕೆಲಸ ಇನ್ನೂ ಮುಗಿದಿಲ್ಲ. ಸರ್ವೆ ಕೆಲಸ ಮುಗಿದ ಮೇಲೆ ಹೇಳಬಹುದು.

ಶ್ರೀ ಬಿ. ದೊಡ್ಡಬೋರೇಗೌಡ.—ಈ ಯೋಜನೆಯಿಂದ ನಾಗಮಂಗಲ, ಕೃಷ್ಣರಾಜಪೇಟೆ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಎಕರೆಗಳಿಗೆ ನೀರಾವರಿಯಾಗುತ್ತದೆ ಮತ್ತು ಈ ಯೋಜನೆ ಪೂರ್ತಿಯಾಗಲು ಎಷ್ಟು ವರ್ಷಗಳು ಬೇಕಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಬಹುಶಃ 4—5 ವರ್ಷದಲ್ಲಿ ಮುಗಿಸಬೇಕೆಂಬ ಪ್ರಯತ್ನ ಮಾಡಿ ದ್ದೇವೆ. ಇದರಲ್ಲಿ ಎರಡು ಚಾನಲ್‌ಗಳು ಬರುತ್ತವೆ. ಲೆಫ್ಟ್ ಬ್ಯಾಂಕ್ ಚಾನಲ್ ಸುಮಾರು 150 ಮೈಲು ಉದ್ದವಿದ್ದು 85 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ರೈಟ್ ಬ್ಯಾಂಕ್ ಚಾನಲ್ ಸುಮಾರು 59 ಮೈಲು ಉದ್ದವಿದ್ದು 15 ಸಾವಿರ ಎಕರೆಗೆ ನೀರಾವರಿಯಾಗುವ ಸಂಭವವಿದೆ.

Sri DIGAMBARA RAO B. KALMANKAR.—May I know when the actual work was started here?

Sri VEERENDRA PATIL.—The actual work was as I said—we had made a beginning and we had started preliminary work. The work on the dam site has been started about a year ago.

ಶ್ರೀ ಎಚ್. ಡಿ. ದೇವೇಗೌಡ.—ಪರ್ಯಾಯ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆ ಯೆಂದು ಹೇಳಿದಿರಿ. ಈ ರೀತಿ ಮಾಡುವಾಗ ಆದಷ್ಟು ಕಡಿಮೆ ಖರ್ಚಿನಲ್ಲಿ ಬರಗಾಲ ಪೀಡಿತ ಪ್ರದೇಶ ಗಳಿಗೆ ಹೆಚ್ಚು ನೀರಾವರಿಯಾಗುವಂತೆ ತುಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಯೋಜನೆಗಳನ್ನು ಪರಿಶೀಲಿಸುವುದು ಮತ್ತು ಸರ್ವೆ ಕೆಲಸ ಮಾಡುವಂಥದ್ದು ಇಂಜನೀಯರುಗಳು. ಯಾವ ರೀತಿ ಕಟ್ಟಿಸಿದರೆ ಕಡಿಮೆ ಖರ್ಚಾಗುತ್ತದೆ ಎಂಬು ದರ ಬಗ್ಗೆ ಇಂಜನೀಯರುಗಳು ಸರ್ಕಾರಕ್ಕೆ ವರದಿ ಮಾಡುತ್ತಾರೆ. ಈಗ ಮೊದಲನೆಯ ಸ್ಟೇಜಿನ ಕೆಲಸ ಪ್ರಾರಂಭವಾಗಿದೆ. ಎರಡನೆಯ ಸ್ಟೇಜ್ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಎಂಬು ದನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಪರ್ಯಾಯ ಯೋಜನೆಗಳ ಬಗ್ಗೆ ಪರಿಶೀಲಿಸುವಾಗ ರಾಜಕೀಯ ಒತ್ತಡಗಳಿಗೆ ಒಳಗಾಗಿ ಪರಿಶೀಲಿಸಲಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಪರಿಶೀಲನೆ ಮಾಡುವವರು ಸರ್ಕಾರದವರು ಅಲ್ಲ. ಇಂಜನಿಯರ್‌ಗಳು. ಪರಿಶೀಲನೆ ಮಾಡುವುದಕ್ಕೂ ರಾಜಕೀಯಕ್ಕೂ ಸಂಬಂಧವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮೂರು ನಾಲ್ಕು ವರ್ಷಗಳಲ್ಲಿ ಈ ಯೋಜನೆಯನ್ನು ಮುಗಿಸಬೇಕೆಂಬ ಆಸಕ್ತಿ ಸರ್ಕಾರಕ್ಕೆ ಇದೆಯೆಂದು ಈಗ ಹೇಳಿದಿರಿ. ನೆನ್ನೆಯ ಬಡ್ಜೆಟ್ ಪುಸ್ತಕ ನೋಡುವಾಗ ಈ ಯೋಜನೆಗೆ ಮುಂದಿನ ಸಾಲಿಗೆ 40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. 16 ಕೋಟಿ ರೂಪಾಯಿ ಪ್ರಾಜೆಕ್ಟ್‌ನ್ನು 4 ವರ್ಷದಲ್ಲಿ ಮುಗಿಸುವುದಕ್ಕೆ ಸಾಧ್ಯವೇ?

ಶ್ರೀ ವೀರೇಂದ್ರ ಪಾಟೀಲ್.— Subject to availability of funds, ನಾಲ್ಕು ವರ್ಷದಲ್ಲಿ ಅದನ್ನು ಮುಗಿಸಬೇಕು ಎಂದು ಇದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಾಯ ಬೇಕು ಎಂದು ಹೇಳುತ್ತಾ ಇದ್ದೇವೆ, ಹಾಗೂ ಕೆಲವು ಬಾಬುಗಳಲ್ಲಿ ಖರ್ಚು ಕಡಿಮೆ ಮಾಡಿ ಆ ಹಣವನ್ನು ಇದಕ್ಕಾಗಿ ಉಪಯೋಗಿಸಿ ಮುಗಿಸುವುದಕ್ಕೆ ಏನೂ ಕಷ್ಟವಿಲ್ಲ ಎಂದು ಅನಿಸುತ್ತದೆ.

Tour of Minister for Development and Co-operation

74. Sri K. P. NADAGOUDA (Mudhol).—

Will the Chief Minister be pleased to state :—

(*a*) the total number of tour programmes of the Minister for Co-operation, Development and Panchayat Raj from March, 1967 to January, 1968;

(*b*) the numbers of times he visited Bagalkot during this period;

(*c*) the total amount of T.A. and D.A. claimed by him for this period?

A.—Sri B. D. JATTI (Minister for Food and Civil Supplies) [On behalf of SRI S. NIJALINGAPPA (Chief Minister)].—

(*a*) 33.

(*b*) 23 times in the course of visits to Raichur, Belgaum, Dharwar and other places in Bijapur District.

(*c*) T.A. Rs. 8,729.20
D.A. Rs. 2,460.00

Total ... Rs. 11,189.20

ಶ್ರೀ ಕೆ. ಪಿ. ನಾಡಗೌಡ.—(ಬ) ಪ್ರಶ್ನೆಗೆ ರಾಯಚೂರು, ಬೆಳಗಾಂ, ಧಾರವಾಡ ಮತ್ತು ವಿಜಾಪುರ ಜಿಲ್ಲೆಯಲ್ಲಿನ ಇತರ ಸ್ಥಳಗಳಿಗೆ ಭೇಟಿ ಕೊಡುವ ಸಂದರ್ಭದಲ್ಲಿ 23 ಬಾರಿ ಬಾಗಲಕೋಟೆಗೆ ಭೇಟಿ ಕೊಟ್ಟಿದ್ದಾರೆ ಎಂದು ಉತ್ತರ ಹೇಳಿದೆ. ಬಾಗಲಕೋಟೆಗೆ ಹೋಗುವ ಜರೂರು ಏನು ಇತ್ತು?

†ಶ್ರೀ ಬಿ. ಡಿ. ಜತ್ತಿ.—ಸ್ಪೆಷಲ್ಲಾಗಿ ಇಲ್ಲಿಗೆ ಹೋಗಿ ಖರ್ಚು ಮಾಡುವುದಕ್ಕಿಂತ ಅದು ದಾರಿಯ ಮೇಲೆ ಇರುವುದರಿಂದ ಎರಡೂ ಕೆಲಸವಾಗುತ್ತದೆ ಎಂದು ಹೋಗಿದ್ದಾರೆ.